ಶ್ರೀ ಎಂ.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ನಿರ್ದಿಷ್ಟವಾದ ಉತ್ತರವನ್ನು ನಾನು ಕೊಟ್ಟಿದ್ದೇನೆ. 38 ಕೋಟಿ ರೂಪಾಯಿಗಳ ಯೋಜನೆಯನ್ನು ಮಾನ್ಯ ಮುಖ್ಯಮಂತ್ರಿಗಳು ಘೋಷಣೆ ಮಾಡಿರತಕ್ಕದ್ದು ಏನಿದೆ ಅದಕ್ಕೆ ಬೇಗ ಮಂಜೂರಾತಿಯನ್ನು ಕೈಗೊಳ್ಳುತ್ತೇವೆ. ಡೇಟ್ ಕೇಳುತ್ತಿದ್ದಾರೆ ಇದೇ ದಿವಸ ಮಾಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಆದಷ್ಟು ಶೀಘ್ರವಾಗಿ ಮಾಡಿಕೊಡುತ್ತೇನೆಂದು ಹೇಳುತ್ತಿದ್ದೇನೆ. ಆಂತರಿಕ ಸಮಸ್ಯೆಗಳನ್ನು ಅಧಿವೇಶನ ಮುಗಿಯುವುದರೊಳಗೆ ನಾನು ಮಾಡುತ್ತೇನೆಂದು ಹೇಳುವುದಿಲ್ಲ. ಆದರೆ ಮಾನ್ಯ ಮುಖ್ಯಮಂತ್ರಿಗಳು ಏನು ಭರವಸೆಯನ್ನು ಕೊಟ್ಟಿದ್ದಾರೆ ಅದನ್ನು ನೆರವೇರಿಸುತ್ತೇನೆ ಎನ್ನುವ ಮಾತನ್ನು ಹೇಳುತ್ತೇನೆ. ಮಾನ್ಯ ಜಗದೀಶ್‌ಶೆಟ್ಟರ್ ಹೇಳಿರತಕ್ಕ ಮಾತುಗಳನ್ನು ಸಹ ಗಮನದಲ್ಲಿಟ್ಟುಕೊಳ್ಳಲಾಗುವುದು.

ಗಂಗಾ ಕಲ್ಯಾಣ ಯೋಜನೆ.

316(2076)

ಶ್ರೀ ರಾಜಶೇಖರ ಶೀಲವಂತ ವೀರಣ್ಣ (ಗುಳ್ಳೇದಗುಡ್ಡ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1998-99ನೇ ಸಾಲಿಗೆ ಗುಳೇದಗುಡ್ಡ ಮತಕ್ಷೇತ್ರದಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಎಷ್ಟು ಜನರಿಗೆ ವೈಯಕ್ತಿಕ ಕೊಳವೆಬಾವಿ ಮಂಜೂರು ಮಾಡಲು ಉದ್ದೇಶಿಸಲಾಗಿತ್ತು;

ಆ) ವೈಯಕ್ತಿಕ ಕೊಳವೆಬಾವಿಗಳನ್ನು ಮಂಜೂರು ಮಾಡಲಾದವರ ಸಂಖ್ಯೆ ಎಷ್ಟು?

ಶ್ರೀ ಕೆ.ಎಂ.ಕೃಷ್ಣರೆಡ್ಡಿ (ಸಮಾಜ ಕಲ್ಯಾಣ ಸಚಿವರು):

ಅ) ಗಂಗಾ ಕಲ್ಯಾಣ ಯೋಜನೆಯಡಿ ವೈಯಕ್ತಿಕ ಕೊಳವೆಬಾವಿ ಮಂಜೂರು ಮಾಡಲು ಅವಕಾಶವಿಲ್ಲ. ಕರ್ನಾಟಕ ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ಇನ್ನೊಂದು ಯೋಜನೆಯನ್ನು ವೈಯಕ್ತಿಕ ಕೊಳವೆ ಬಾವಿಯನ್ನು ಅನುಷ್ಠಾನಗೊಳಿಸುತ್ತಿದ್ದು, 1998-99ನೇ ಸಾಲಿನ ಆಯವ್ಯಯದಲ್ಲಿ ಹಣದ ಅವಕಾಶ ಮಾಡಿಕೊಳ್ಳದೆಯಿದ್ದ ಪ್ರಯುಕ್ತ ಯಾವುದೇ ಕೊಳವೆಬಾವಿಯನ್ನು ಕೊರೆದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ರಾಜಶೇಖರ ವೀಲವಂತ ವೀರಣ್ಣ: ಮಾನ್ಯ ಅಧ್ಯಕ್ಷರೆ, ಪರಿಶಿಷ್ಟಜಾತಿ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ಯೋಜನೆಯ ವತಿಯಿಂದ ವೈಯಕ್ತಿಕ ಕೊಳವೆಬಾವಿಗಳ್ನು ಕೊಡಲಾಗುತ್ತಿದೆ. 1998-99ನನೇ ಇಸವಿಯಲ್ಲಿ ಆಯವ್ಯಯದಲ್ಲಿ ದುಡ್ಡು ಇರಲಾರದ ಕಾರಣದಿಂದ ಕೊಳವೆಬಾವಿಗಳನ್ನು ಕೊರೆಯಲಾಗಿಲ್ಲವೆಂದು ಮಾನ್ಯಮಂತ್ರಿಗಳು ತಿಳಿಸಿದ್ದಾರೆ. ಆದರೆ ಈ ವರ್ಷ ಪ್ರಸಕ್ತ ವರ್ಷದಲ್ಲಿ ಏನು ಗುರಿಯನ್ನು ಇಟ್ಟುಕೊಂಡಿದ್ದಾರೆ? ಕೊಳವೆಬಾವಿಗಳನ್ನು ಕೊರೆಯುತ್ತಾರೋ ಅಥವಾ ಇಲ್ಲವೋ ಎಂಬುದನ್ನು ಮಂತ್ರಿಗಳು ತಿಳಿಸಬೇಕು. ಅದರ ಜೊತೆಯಲ್ಲಿ ವೈಯಕ್ತಿಕ ಕೊಳವೆಬಾವಿ ಸ್ಕೀಮ್‌ನಲ್ಲಿ ನೋ ವಾಟರ್ ನೋ ಮನಿ ಎನ್ನುವುದರಿಂದ ಬಹಳಷ್ಟು ಪ್ರಾದೇಶಿಕ ಅಸಮತೋಲನ ಅಲ್ಲಿ ಆಗುತ್ತಿದೆ. ಅಲ್ಲಿ ಬೇರೆ ಬೇರೆ ಜನ ತಮ್ಮ ತಮ್ಮ ಹೊಲಗಳಲ್ಲಿ ಬಾವಿಗಳನ್ನು ಕೊರೆಸಿದಾಗ ನೀರು ಬೀಳುತ್ತಿದೆ. ಹಾಗೆ ಇದ್ದರೂ ಆ ಭಾಗದಲ್ಲಿ ನೋ ವಾಟರ್ ನೋ ಮನಿ ಸ್ಕೀಮ್ ಇರುವುದರಿಂದ ಯಾರು ಬೋರ್‌ವೆಲ್ ಕಂಟ್ರಾಕ್ಟರ್ ಇದ್ದಾರೆ ಅವರು ಯಾರೂ ಮುಂದೆ ಬರುತ್ತಿಲ್ಲ. ಎಲ್ಲಿ ನೀರು ಬೀಳುತ್ತದೆ ಅಲ್ಲಿ ಮಾತ್ರ ಕೊರೆಯುತ್ತಿದ್ದಾರೆ, ಬೇರೆ ಕಡೆ ಕೊಳವೆಬಾವಿ ಕೊರೆಯುತ್ತಿಲ್ಲ. ಆ ದೃಷ್ಟಿಯಿಂದ ಅವರಿಗೆ ಏನಾದರೂ ಒಂದು ವ್ಯವಸ್ಥೆಯನ್ನು ಮಾಡಬೇಕು. ಡೀಸಲ್ ಖರ್ಚು ಕೊಡುತ್ತೇವೆಂದು ತಿಳಿಸಬೇಕು ಅಥವಾ ಇಷ್ಟು ಪರ್ಸೆಂಟೇಜ್ ಕೊಡುತ್ತೇವೆನ್ನುವುದನ್ನು ತಿಳಿಸಬಹುದು. ಏನಾದರೂ ಮಾಡಿದರೆ ಅವರಿಗೆ ಅನುಕೂಲವಾಗುತ್ತದೆ. ಸನ್ಮಾನ್ಯ ಮಂತ್ರಿಗಳು ಈ ವರ್ಷದ ಗುರಿ ಏನಿದೆ ಎಂಬುದನ್ನು ತಿಳಿಸಿಬೇಕು.

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಮೂರು ಅಧಿವೇಶನಗಳಿಂದ ಇದೇ ಪ್ರಶ್ನೆಯನ್ನು ಕೇಳುತ್ತಿದ್ದಾರೆ. ಮೂರು ಅಧಿವೇಶನಗಳಲ್ಲಿ ಇದೇ ಉತ್ತರವನ್ನು ಸರ್ಕಾರ ಕೊಡುವ ಅನಿವಾರ್ಯ ಪರಿಸ್ಥಿತಿ ಬಂದಿದೆ. ಕಾರಣ, ಇವರ ಕ್ಷೇತ್ರದಲ್ಲಿ ಕೊಳವೆಬಾವಿ ಸುಮಾರು 400ಅಡಿ ಆಳಕ್ಕೆ ಹೋಗಬೇಕು. ಸುಮಾರು ನೂರು ಅಡಿಯಷ್ಟು ಪೈಪ್ ಹಾಕಬೇಕು. ಈ ಕೆಲಸ ಮಾಡಲಿಕ್ಕೆ ಯಾರೂ ಮುಂದೆ ಬರಲಿಲ್ಲ. ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ಆಶ್ವಾಸನೆಯನ್ನು ಕೊಡುತ್ತೇನೆ, ಈ ಸಲ ಏನಾದರೂ ಮಾಡಿ ನಿಮ್ಮ ಕ್ಷೇತ್ರದಲ್ಲಿ ನೋ ವಾಟರ್ ನೋ ಮನಿ ಸ್ಕೀಮ್‌ನ್ನು ಸ್ವಲ್ಪ ಸಡಿಲಗೊಳಿಸಿಯಾದರೂ ಕೊಳವೆಬಾವಿ ಕೊರೆಯಲಿಕ್ಕೆ ಪ್ರಯತ್ನಪಡುತ್ತೇನೆ. ಏಕೆಂದರೆ ತಮಗೆ ಗೊತ್ತಿದೆ, ತಾವೇ ಹೇಳುತ್ತಿದ್ದೀರಿ. ಯಾರೂ ಕೊಳವೆಬಾವಿ ಕೊರೆಯುವುದಕ್ಕೆ ಮುಂದೆ ಬರುತ್ತಿಲ್ಲ. ಬಹಳ ಆಳವಾಗಿ ಹೋಗ ಬೇಕು. ನೂರು ಅಡಿ ಪೈಪು ಹಾಕಬೇಕು. ಆದ್ದರಿಂದ ಆದಷ್ಟು ಮಟ್ಟಿಗೆ ಇದರ ಬಗ್ಗೆ ಗಮನಹರಿಸಿ ನಿಗಮಕ್ಕೆ ಸೂಕ್ತ, ನಿರ್ದೇಶನವನ್ನು ಕೊಡುತ್ತೇನೆ;

ಶ್ರೀ ರಾಜಶೇಕರ ಶೀಲವಂತ ವೀರಣ್ಣ: ಮಾನ್ಯ ಅಧ್ಯಕ್ಷರೆ, ಸ್ವಂತ ಜಮೀನುಗಳಲ್ಲಿ

ಬೋರ್‌ವೆಲ್‌ನಿಂದ ನೀರು ತೆಗೆಯುತ್ತಿದ್ದಾರೆ. ಅವರಿಗೆ ಚೆನ್ನಾಗಿ ನೀರು ಸಿಗುತ್ತಿದೆ. 100ರಿಂದ 150ಅಡಿಯಲ್ಲಿ ನೀರು ಬರುತ್ತಿದೆ. ಆದರೆ ನಿಮ್ಮ ಗೌರ್ನಮೆಂಟ್ ಎಜೆನ್ಸಿ ರಿಗ್‌ನವರು ಯಾರೂ ರಿಸ್ಕ್ ತೆಗೆದುಕೊಳ್ಳುವುದಕ್ಕೆ ತಯಾರಿಲ್ಲ. ತಾವು ಸ್ವಲ್ಪ ಮನಸ್ಸಿನಲ್ಲಿ ತೆಗೆದುಕೊಳ್ಳುತ್ತೇನೆ ಎಂದು ಏನು ಹೇಳಿದ್ದೀರಿ ಅದನ್ನು ಇನ್ನೊಮ್ಮೆ ಸ್ಪಷ್ಟವಾಗಿ ಮಾಡಿಕೊಡುತ್ತೇನೆಂದರೆ ಬಹಳ ಅನುಕೂಲವಾಗುತ್ತದೆ.

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ: ಆದಷ್ಟು ಜಾಗ್ರತೆ ಅದನ್ನು ಮಾಡುತ್ತೇನೆ.

ಧಾರವಾಡದಲ್ಲಿ ನಗರ ಯೋಜನಾವಲಯ ಕಛೇರಿಯ ಸ್ಥಳಾಂತರ

317(2116)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ನಗರಾನಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡದಲ್ಲಿರುವ ನಗರ ಯೋಜನಾ ಇಲಾಖೆಯ ವಲಯ ಕಛೇರಿಯನ್ನು ವಿಭಾಗ ಕಛೇರಿಯನ್ನಾಗಿ ಮಾಡಿ ಬೆಳಗಾಂಗೆ ಸ್ಥಳಾಂತರಿಸುವ ಉದ್ದೇಶ ಸರ್ಕಾರಕ್ಕಿದೆಯೇ?

ಆ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು?

ಶ್ರೀ ಎಂ.ಎಸ್.ಪಾಟೀಲ್ (ನಗರಾಭಿವೃದ್ಧಿ ಸಚಿವರು):

ಅ) ಹೌದು.

ನಗರ ಯೋಜನಾ ಜಂಟಿ ನಿರ್ದೇಶಕರು, ವಲಯ ಕಛೇರಿ, ಧಾರವಾಡ ಇದನ್ನು ಮಂಜೂರಾಗಿರುವ ಎಲ್ಲಾ ತಾತ್ಕಾಲಿಕ ಹುದ್ದೆಗಳೊಂದಿಗೆ ಕೂಡಲೇ ಜಾರಿಗೆ ಬರುವಂತೆ ಬೆಳಗಾಂ ಕೇಂದ್ರಸ್ಥಾನಕ್ಕೆ ಸ್ಥಳಾಂತರಿಸಲು ಸರ್ಕಾರಿ ಆದೇಶ ಸಂ: ನಅಇ 109 ನಯೋಸೆ 97 ದಿನಾಂಕ: 29-1-99ರಲ್ಲಿ ಮಂಜೂರಾತಿ ನೀಡಿದೆ.

ಆ) ನಗರ ಯೋಜನಾ ಇಲಾಖೆಯಲ್ಲಿ ಎರಡು ಹೊಸ ವಿಭಾಗೀಯ ಕಛೇರಿಗಳನ್ನು ಗುಲ್ಬರ್ಗಾ ಹಾಗೂ ಮೈಸೂರು ಕೇಂದ್ರಸ್ಥಾನಗಳಲ್ಲಿ ಸ್ಥಾಪಿಸಲು ಸರ್ಕಾರ ಮಂಜೂರಾತಿ ನೀಡಿದೆ. ಬೆಳಗಾಂ, ಕಂದಾಯ ವಿಭಾಗಕ್ಕೆ ನಗರ ಯೋಜನಾ ಜಂಟಿ ನಿರ್ದೇಶಕರು ವಿಭಾಗೀಯ ಕಛೇರಿಯನ್ನು ಸ್ಥಾಪಿಸಲು ಹಾಲಿ ಧಾರವಾಡದಲ್ಲಿರುವ ವಲಯ ಕಛೇರಿಯನ್ನು ಮಂಜೂರಾದ ಎಲ್ಲಾ ಹುದ್ದೆಗಳೊಂದಿಗೆ ಬೆಳಗಾಂ, ಕಂದಾಯ ವಿಭಾಗ